ಈಂಡಿಟ ಓಂ.4 (ಅತುಟ)
ಆಜಠಿಥುಣುಂಟ ಖುಜಜಣ
(ಖ.ಕ.ಓಂ.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಸ್ಪೆಷಲ್.ಸಿ. ಸಂಖ್ಯೆಃ 02/2014

ಪ್ರಾ.ಸಾ. 10 ಚಾ.ಸಾ. 16

| | |
|---|---|
| ಸಾಕ್ಷಿದಾರರ ಹೆಸರು | : **ಅಣವಿರಪ್ಪ** |
| ತಂದೆಯ ಹೆಸರು | :ಸಿದ್ರಾಮಪ್ಪ |
| ವಯಸ್ಸು | 57 ವರ್ಷಗಳು |
| ಉದ್ಯೋಗ | : **ಶರಸ್ತೆದಾರ** |
| ವಾಸ | : **ಕಲಬುರಗಿ** |

**ಪ್ರಮಾಣವಚನ ಬೋಧಿಸಿದ ದಿನಾಂಕಃ 12-02-2026**
**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 2009 ರಿಂದ 2017 ರ ವರೆಗೆ ನಾನು ಸುರಪುರದಲ್ಲಿ ಕಂದಾಯ ನಿರಿಕ್ಷಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣ 2 ನೇ ಆರೊಪಿತರಾದ ಸಿದ್ದಯ್ಯ ಸ್ವಾಮಿ ಗೊತ್ತು. ದಿಃ 15.11.2012 ರಂದು ಬೆಳಿಗ್ಗೆ 11-00 ಗಂಟೆಗೆ ನಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಲೋಕಾಯುಕ್ತ ಠಾಣೆಗೆ ಯಾದಗಿರಿಗೆ ಹಾಜರಾಗಿರುತ್ತೇನೆ. ಅಲ್ಲಿ ಹಂಚನಾಳ ಪಿಐ ರವರು ಇದ್ದರು. ನನಗೆ ಮುನ್ನ ಚಾಸಾಃ 14 ರವರು ಹಾಜರಿದ್ದರು. ಚಾಸಾಃ 4, ಚಾಸಾಃ 5, ರವರು ನಂತರ ಬಂದಿರುತ್ತಾರೆ. ನಂತರ ಒಬ್ಬರಿಗೆ ಒಬ್ಬರು ಪರಿಚಯ ಮಾಡಿಕೊಂಡೆವು. ಫಿರ್ಯಾದಿಯವರು 2010 ರಲ್ಲಿ ಜಮೀನಿನ ಎನ್.ಎ. ಬಗ್ಗೆ ಅರ್ಜಿ ಸಲ್ಲಿಸಿದ್ದು ಆ ಜಮೀನಿನ ಸರ್ವೆ ನಂ. 46/1/2, 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಎನ್.ಎ. ಗಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಅರ್ಜಿ ಸಲ್ಲಿಸಿದ್ದರು. ಸ್ಥಳ ಪರಿಶೀಲನೆಗಾಗಿ ಎ.ಸಿ. ಅವರಿಗೆ ಡಿ.ಸಿ. ಅವರು ಆದೇಶ ಮಾಡಿದ್ದರು. ಎ.ಸಿ. ಕಛೇರಿಯ ಮ್ಯಾನೇಜರ ಗುರುಪಾದ ಪಾಟೀಲ ಅವರು ವರದಿ ತಂದು ಡಿ ಸಿ ಕಛೇರಿಯಲ್ಲಿ ಸಲ್ಲಿಸಿರುತ್ತಾರೆ. ಆ ಸಲುವಾಗಿ ಲಂಚಕ್ಕಾಗಿ ಬೇಡಿಕೆ ಇಟ್ಟಿರುವದಾಗಿ ಹೇಳಿದರು. ಈ ಮಾತುಕತೆಯನ್ನು ಲೋಕಾಯುಕ್ತ ಠಾಣೆಯಿಂದ ಕೊಟ್ಟ ವೈಸ ರೆಕಾರ್ಡನಲ್ಲಿ ದಾಖಲು ಮಾಡಿಕೊಂಡು ತಂದು ಹಾಜರಪಡಿಸಿದ್ದರು. ಈ ಪ್ರಕರಣದಲ್ಲಿ ಸಂಭಾಷಣೆ ಮಾಡಲಾಗಿದ್ದ ವ್ಯಕ್ತಿಗಳಲ್ಲಿ ನಮ್ಮ ಕಛೇರಿಯಲ್ಲಿ

ಕೆಲಸಮಾಡುತ್ತಿದ್ದ ಸಿದ್ದಯ್ಯ ಸ್ವಾಮಿ ಅವರು ಇರುವುದಾಗಿ ಹೆಳಿ ಆ ಕಾರಣಕೆಕ ಅವರ ದ್ವನಿ ಗುರತಿಸಲು ಕೆಳಿರುತ್ತಾರೆ. ಒಟ್ಟು 3 ಸಿಡಿ ಗಳನ್ನು ಈ ಪ್ರಕರಣದಲ್ಲಿ ಮಾಡಿದ್ದು. ನನಗೆ ವಾಯ್ಸು ರಿಕಾರ್ಡರ ಮೂಲಕ 3 ಸಿಡಿ ಗಳಲ್ಲಿನ ದ್ವನಿ ಕೆಳಿಸಿರುತ್ತಾರೆ. ಚಾಸಾಃ 14 ರವರು 1 ನೇ ಆರೊಪಿತರ ದ್ವನಿಯನ್ನು ಗುರುತಿಸಿದ್ದು ನಾನು 2 ನೇ ಆರೊಪಿ ಸಿದ್ದಯ್ಯ ಸ್ವಾಮಿ ರವರ ದ್ವನಿಯನ್ನು 1 ನೇ ಸಿಡಿಯಲ್ಲಿ ಇದುದ್ದನ್ನು ಮಾತ್ರ ಗುರುತಿಸಿರುತ್ತೆನೆ. ಉಳಿದ ಎರಡು ಸಿಡಿ ಗಳಲ್ಲಿ ಎರಡನೆ ಆರೊಪಿಯ ದ್ವನಿ ಇರಲಿಲ್ಲ.

3. ದಿಃ 15.11.2012 ರಂದು ಮಃ 12-30 ರಿಂದ 2-00 ಗಂಟೆಯ ವರೆಗೆ ಲೋಕಾಯುಕ್ತ ಕಛೇರಿಯಲ್ಲಿ ಈ ಪ್ರಕ್ರಿಯೇ ನಡೆಯಿತು. ಈ ಬಗ್ಗೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ನಿಪಿ 30 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 30(ಡಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಿ,ಡಿ. ಗಳು ಮು.ಮಾ.1 ರಿಂದ 3 ಎಂದು ಗುರುತಿಸಲಾಗಿದೆ. ಮುಮಾ 1 ರಲ್ಲಿನ 2 ನೇ ಆರೊಪಿಯ ದ್ವನಿ ಕೇಳಿದರೆ ಗುರುತಿಸುತ್ತೆನೆ. ಸಾಕ್ಷಿಗೆ ಮುಮಾ 1 ನ್ನು ತೆರೆದ ನ್ಯಾಯಾಲಯದಲ್ಲಿ ಅಧಿಕೃತ ಗಣಕಯಂತ್ರದಲ್ಲಿ ಪ್ಲೆಮಾಡಿ ಕೇಳಿಸಲಾಗಿ ಅದರಲ್ಲಿ 3 ಜನ ಮಾತನಾಡುತ್ತಿದ್ದು ಅವರಲ್ಲಿ ಒಬ್ಬ ವ್ಯಕ್ತಿಯ ದ್ವಸಿ 2 ನೇ ಆರೋಪಿ ಸಿದ್ದಯ್ಯ ಸ್ವಾಮಿಯದ್ದು ಇರಬಹುದು ಎಂದು ನುಡಿಯುತ್ತಾರೆ. ಸದರಿ ಸಂಭಾಷಣೆಯಲ್ಲಿ ಲಂಚದ ಹಣ ಬೇಡಿಕೆ ಇಟ್ಟ ಬಗ್ಗೆ ಮಾತನಾಡುವುದು ಕಂಭ ತೆಗೆಯುವುದು ಮನೆಕಟ್ಟಿದ ಬಗ್ಗೆ ದಂಡ ಹಾಕುತ್ತಾರೆಂದು ಕೆಳಿಸುತ್ತದೆ ಎಂದು ನುಡಿಯುತ್ತಾರೆ. ಸದರಿ ದ್ವನಿ ಗುರುತಿಸಿದ ವ್ಯಕ್ತಿ ನ್ಯಾಯಲಯದ ಮುಂದೆ ಇರುತ್ತಾರೆ. ನಂತರ ಈ ಪ್ರಕರಣದ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೆನೆ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ ಎಸ್ ಎಮ್ ವಕೀಲರಿಂದ ಃ</u>

4 ನಾನು ಈ ಪ್ರಕರಣದಲ್ಲಿನ ಹಸನಾಪೂರ ಸುರಪೂರ ಕಂದಾಯ ವೃತನಿತದಲ್ಲಿ ಬರು ತ್ತಿತ್ತು. ನಾನು ನಮ್ಮ ಕಛೆರಿಯ ಚಲನ ವಲನ ಪುಸ್ತಕದಲ್ಲಿ ಲೊಕಾಯುಕ್ತ ಠಾಣೆಗೆ ಹೊಗುವ ಬಗ್ಗೆ ನಮೂದಿಸಿಲ್ಲ. ನಾನು ಆ ದಿನ ಲೊಕಾಯಕ್ತ ಠಾಣೆಗೆ ಹೊದ ಬಗ್ಗೆ ನಮ್ಮ ಕಛೆರಿಯಲ್ಲಿ ಯಾವುದೇ ಅಧಿಕೃತ ದಾಖಲೆ ಇಲ್ಲ ಎಂದರೆ ಸರಿ. ನನಗೆ ಲೊಕಾಯಕ್ತ ಪೊಲಿಸರು ನೊಟಿಸ ನಿಡಿದ್ದು ಅದರಲ್ಲಿ ದಿನಾಂಕ ಮತ್ತು ಸಮಯ ಹೇಳಿರಲಿಲ್ಲ. ನಾನು ಕೆಳಿದ ಮುಮಾ 1 ಸಿಡಿ ಯಲ್ಲಿ ಸ್ವಷ್ಟ ದ್ವನಿ ಇಲ್ಲಾ ಎಂದರೆ ಸರಿ. ಏನೂ ಸಂಭಾಷಣೆ ಇರುತ್ತದೆ ಎಂದು ನಾನು ಬರೆದು ನಿಡಿಲ್ಲ ಎಂದರೆ ಪಂಚನಾಮೆಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 24 ರಲ್ಲಿ ಸಂಭಾಷಣೆಯಲ್ಲಿ ನನ್ನ ಸಹಿ ಇಲ್ಲಾ ಎಂದರೆ ಸರಿ.

ಮುಮಾ 1 ಸಿಡಿಯಲ್ಲಿನ ಧ್ವನಿಯಲ್ಲಿ 2 ನೇ ಆರೋಪಿ ಏನೂ ಕೇಳಿರುತ್ತಾರೆಂದು ಸ್ಪಷ್ಟವಾಗಿಲ್ಲ ಎಂದರೆ ಸರಿ.

5. ನಾನು ಆ ದಿನ 10-00 ಕ್ಕೆ ಕಛೇರಿ ಬಿಟ್ಟಿರುತ್ತೇನ. ನಮ್ಮ ಕಛೇರಿಯಿಂದ ಯಾದಗಿರಿಗೆ ಬರಲು ಸುಮಾರು 1 ಗಂಟೆ ಪ್ರಯಾಣ ಇರುತ್ತದೆ. ನಾನು ಲೊಕಾಯುಕ್ತ ಠಾಣೆಗೆ ಬರುವ ಮುನ್ನ ಏನೂ ಮಾತನಾಡಿರುತ್ತಾರೆ ಮತ್ತು ಯಾವ ಪ್ರಕ್ರಿಯೇ ಮಾಡಿರತ್ತಾರೆಂದು ನನಗೆ ಗೋತ್ತಿಲ್ಲ ಎಂದರೆ ಸರಿ. ನಾನು ಲೊಕಾಯುಕ್ತರ ಕೊರಿಕೆಯ ಮೆರೆಗೆ ಹೇಳಿಕೆ ನಿಡಿದ್ದು ಎಂದರೆ ಸರಿಯಲ್ಲ. ನಾನು ಸಿದ್ದಯ್ಯಸ್ವಾಮಿ ಏನೂ ಮಾತನಾಡಿರುತ್ತಾರೆಂದು ಬರೆದು ಕೊಟ್ಟಿಲ್ಲ ಎಂದರೆ ಸರಿ. ಮುಮಾ 1 ಸಿಡಿ ವೈಸ ರೆಕಾರ್ಡರ ನಲ್ಲಿ ಇದ್ದು ಸದರಿ ವೈಸ ರೆಕಾರ್ಡರ ಯಾವ ಕಂಪನಿಯದ್ದು ಎಂದು ಗೊತ್ತಿಲ್ಲ. ಸಿಡಿ ಯಾವ ಕಂಪಿನಿಯದ್ದು ಎಂದು ಗೊತ್ತಿಲ್ಲ. ಸದರಿ ಧ್ವನಿಯನ್ನು ಕೇಳಿದಾಗ ಸಿದ್ದಯ್ಯಸ್ವಾಮಿಯ ಧ್ವನಿ ನಿಖರವಾಗಿ ಇಲ್ಲಾ ಎಂದರೆ ಪಂಚನಾಮೆಯ ಕಾಲದಲ್ಲಿ ಕೆಳಿದ್ದ ಧ್ವನಿ ಸ್ಪಷ್ಟವಾಗಿದ್ದು ನ್ಯಾಯಾಲಯದ ಮುಂದೆ ಕೇಳಿದ ಧ್ವನಿ ಅಷ್ಟು ಸ್ಪಷ್ಟವಾಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನಮ್ಮ ಹಿರಿಯ ಅಧಿಕಾರಿಗಳು ಮತ್ತು ಲೊಕಾಯಕ್ತ ಪೊಲಿಸರ ಮಾತು ಕೇಳಿ ಸುಳ್ಳು ಹೆಳುತ್ತಿದ್ದೆನೆಂದರೆ ಸರಿಯಲ್ಲ.

6. ದಿಃ 15.11.2012 ರಂದು ಬೆಳಿಗ್ಗೆ 11-00 ಗಂಟೆಗೆ ನಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಲೋಕಾಯುಕ್ತ ಠಾಣೆಗೆ ಯಾದಗಿರಿಗೆ ಹಾಜರಾಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಹಂಚನಾಳ ಪಿಐ ರವರು ಇದ್ದರು. ನನಗೆ ಮುನ್ನ ಚಾಸಾಃ 14 ರವರು ಹಾಜರಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 4, ಚಾಸಾಃ 5, ರವರು ನಂತರ ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಒಬ್ಬರಿಗೆ ಒಬ್ಬರು ಪರಿಚಯ ಮಾಡಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯವರು 2010 ರಲ್ಲಿ ಜಮೀನಿನ ಎನ್.ಎ. ಬಗ್ಗೆ ಅರ್ಜಿ ಸಲ್ಲಿಸಿದ್ದು ಆ ಜಮೀನಿನ ಸರ್ವೆ ನಂ. 46/1/2, 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಎನ್.ಎ. ಗಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಅರ್ಜಿ ಸಲ್ಲಿಸಿದ್ದರು. ಸ್ಥಳ ಪರಿಶೀಲನೆಗಾಗಿ ಎ.ಸಿ. ಅವರಿಗೆ ಡಿ.ಸಿ. ಅವರು ಆದೇಶ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ.ಸಿ. ಕಛೇರಿಯ ಮ್ಯಾನೇಜರ ಗುರುಪಾದ ಪಾಟೀಲ ಅವರು ವರದಿ ತಂದು ಡಿ ಸಿ ಕಛೇರಿಯಲ್ಲಿ ಸಲ್ಲಿಸಿರುತ್ತಾರೆ. ಆ ಸಲುವಾಗಿ ಲಂಚಕ್ಕಾಗಿ ಬೇಡಿಕೆ ಇಟ್ಟಿರುವದಾಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮಾತುಕತೆಯನ್ನು ಲೋಕಾಯುಕ್ತ ಠಾಣೆಯಿಂದ

ಕೊಟ್ಟ ವೈಸ ರೆಕಾರ್ಡನಲ್ಲಿ ದಾಖಲು ಮಾಡಿಕೊಂಡು ತಂದು ಹಾಜರಪಡಿಸಿದ್ದರು. ಈ ಪ್ರಕರಣದಲ್ಲಿ ಸಂಭಾಷಣೆ ಮಾಡಲಾಗಿದ್ದ ವ್ಯಕ್ತಿಗಳಲ್ಲಿ ನಮ್ಮ ಕಛೇರಿಯಲ್ಲಿ ಕೆಲಸಮಾಡುತ್ತಿದ್ದ ಸಿದ್ದಯ್ಯ ಸ್ವಾಮಿ ಅವರು ಇರುವುದಾಗಿ ಹೆಳಿ ಆ ಕಾರಣಕೆಕ ಅವರ ಧ್ವನಿ ಗುರತಿಸಲು ಕೆಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು 3 ಸಿಡಿ ಗಳನ್ನು ಈ ಪ್ರಕರಣದಲ್ಲಿ ಮಾಡಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾಯ್ಸು ರಿಕಾರ್ಡರ ಮೂಲಕ 3 ಸಿಡಿ ಗಳಲ್ಲಿನ ಧ್ವನಿ ಕೆಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 14 ರವರು 1 ನೇ ಆರೊಪಿತರ ಧ್ವನಿಯನ್ನು ಗುರುತಿಸಿದ್ದು ನಾನು 2 ನೇ ಆರೊಪಿ ಸಿದ್ದಯ್ಯ ಸ್ವಾಮಿ ರವರ ಧ್ವನಿಯನ್ನು 1 ನೇ ಸಿಡಿಯಲ್ಲಿ ಇದುದ್ದನ್ನು ಮಾತ್ರ ಗುರುತಿಸಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ಎರಡು ಸಿಡಿ ಗಳಲ್ಲಿ ಎರಡನೆ ಆರೊಪಿಯ ಧ್ವನಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಿಃ 15.11.2012 ರಂದು ಮಃ 12-30 ರಿಂದ 2-00 ಗಂಟೆಯ ವರೆಗೆ ಲೋಕಾಯುಕ್ತ ಕಛೇರಿಯಲ್ಲಿ ಈ ಪ್ರಕ್ರಿಯೇ ನಡೆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ 1 ರಲ್ಲಿನ 2 ನೇ ಆರೊಪಿಯ ಧ್ವನಿ ಕೇಳಿದರೆ ಗುರುತಿಸುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮುಮಾ 1 ನ್ನು ತೆರೆದ ನ್ಯಾಯಾಲಯದಲ್ಲಿ ಅಧಿಕೃತ ಗಣಕಯಂತ್ರದಲ್ಲಿ ಪ್ಲೆಮಾಡಿ ಕೇಳಿಸಲಾಗಿ ಅದರಲ್ಲಿ 3 ಜನ ಮಾತನಾಡುತ್ತಿದ್ದು ಅವರಲ್ಲಿ ಒಬ್ಬ ವ್ಯಕ್ತಿಯ ಧ್ವಸಿ 2 ನೇ ಆರೋಪಿ ಸಿದ್ದಯ್ಯ ಸ್ವಾಮಿಯದ್ದು ಇರಬಹುದು ಎಂದು ನುಡಿಯುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯಲ್ಲಿ ಲಂಚದ ಹಣ ಬೇಡಿಕೆ ಇಟ್ಟ ಬಗ್ಗೆ ಮಾತನಾಡುವುದು ಕಂಭ ತೆಗೆಯುವುದು ಮನೆಕಟ್ಟಿದ ಬಗ್ಗೆ ದಂಡ ಹಾಕುತ್ತಾರೆಂದು ಕೆಳಿಸುತ್ತದೆ ಎಂದು ನುಡಿಯುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಧ್ವನಿ ಗುರುತಿಸಿದ ವ್ಯಕ್ತಿ ನ್ಯಾಯಲಯದ ಮುಂದೆ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಈ ಪ್ರಕರಣದ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.